ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 83-87
Bi-Monthly, Peer-Reviewed, Open Access, Indexed Journal

ISSN: 2583-3510
SIRDF
JOURNALS
editor@srujani.in
www.srujani.in

# ಬಾಳೆ ಬೆಳೆಯ ಜೊತೆಗೆ ಬೆಳೆಯುವ ಮಿಶ್ರ ಹಾಗೂ ಮಧ್ಯಂತರ ಬೆಳೆಗಳು ಮತ್ತು ಮಾರುಕಟ್ಟೆ

**ಮಾಳ್ಗಿ ತಿಮ್ಮಣ್ಣ[*] ಮತ್ತು ಡಾ.ಕೆ.ಎಂ.ಮಂಜುನಾಥ[**]**
[*]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
[**]ಮಾರ್ಗದರ್ಶಕರು ಮತ್ತು ನಿವೃತ್ತ ಪ್ರಾಂಶುಪಾಲರು, ಎಂ.ಕಾಮ್ ನಿರ್ದೇಶಕರು, ಎಸ್.ಜೆ.ಆರ್ ಕಾಲೇಜು, ಬೆಂಗಳೂರು

***Abstract:***

*ಮಿಶ್ರ ಹಾಗೂ ಮಧ್ಯಂತರ ಬೆಳೆಗಳ ಬೇಸಾಯವು ರೈತರಿಗೆ ಆದಾಯ ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಬೇಸಾಯ ಪದ್ಧತಿಯಲ್ಲಿ ಏಕ ಬೆಳೆ ಕೈ ಕೊಟ್ಟರೆ ಮತ್ತೊಂದು ಬೆಳೆ ಕೈಹಿಡಿಯುತ್ತದೆ. ಸಾಮಾನ್ಯವಾಗಿ ರೈತರು ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದಾಗಿ ಪ್ರತಿವರ್ಷ ತೊಂದರೆಯನ್ನು ಅನುಭವಿಸುತ್ತಾರೆ. ನಷ್ಟವಾದ ಬೆಳೆಗೆ ಸರ್ಕಾರ ನೀಡುವ ಪರಿಹಾರಧನ ನಗಣ್ಯ. ಹೀಗೆ ಹಲವಾರು ಸಮಸ್ಯೆಗಳ ನಡುವೆ ರೈತರು ಮಿಶ್ರ ಹಾಗೂ ಮಧ್ಯಂತರ ಬೆಳೆಗಳ ಬೇಸಾಯ ಪದ್ಧತಿಯ ಮೂಲಕ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಬಾಳೆ ಬೆಳೆಯ ಜೊತೆಗೆ ಬೆಳೆಯುವ ಮಿಶ್ರ ಮತ್ತು ಮಧ್ಯಂತರ ಬೆಳೆಗಳು ಮತ್ತು ಅವುಗಳಿಗಿರುವ ಮಾರುಕಟ್ಟೆಗಳ ಬಗ್ಗೆ ವಿಶ್ಲೇಷಿಸಲಾಗಿದೆ.*

***Keywords:*** *ಬಳ್ಳಾರಿ, ಕೃಷಿ, ಏಕ ಬೆಳೆ, ಮಿಶ್ರ ಬೆಳೆ, ಮಧ್ಯಂತರ ಬೆಳೆ, ರೈತರು, ಮಾರುಕಟ್ಟೆ.*

## ಪೀಠಿಕೆ

ಬಳ್ಳಾರಿ ಜಿಲ್ಲೆಯ ರೈತರು ತುಂಗಭದ್ರ ನದಿಯಿಂದಾಗಿ ನೀರಾವರಿ ಭೂಮಿಯನ್ನು ಹೊಂದಿದ್ದಾರೆ. ಈ ಜಿಲ್ಲೆಯಲ್ಲಿ ಅತಿಹೆಚ್ಚು ಬಾಳೆ ಮತ್ತು ಇತರ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಜಿಲ್ಲೆಯ ಕೆಲವು ತಾಲೂಕುಗಳು ತುಂಗಭದ್ರ ನದಿಯಿಂದ ನೇರವಾಗಿ ಪ್ರಯೋಜನ ಪಡೆದು ನೀರಾವರಿ ಬೆಳೆಗಳನ್ನು ಬೆಳೆದರೆ ಸಂಡೂರು, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ ತಾಲೂಕುಗಳ ರೈತರು ತುಂಗಭದ್ರಾ ನದಿಯ ಹತ್ತಿರದಲ್ಲಿರುವುದರಿಂದ ಕೊಳವೆ ಬಾವಿಗಳನ್ನು ಕೊರೆಸಿ ಹನಿ ನೀರಾವರಿ ಮೂಲಕ ಬಾಳೆ, ಅಡಿಕೆ, ತೆಂಗು, ಮಾವು, ಪಪ್ಪಾಯ, ದಾಳಿಂಬೆ, ಇತ್ಯಾದಿ ತೋಟಗಾರಿಕೆ ಬೆಳೆಗಳನ್ನು ಏಕ, ಮಿಶ್ರ ಮತ್ತು ಮಧ್ಯಂತರ ಬೆಳೆಗಳನ್ನು ಬೆಳೆಯುತ್ತಾರೆ.

## ಬಾಳೆ ಬೆಳೆ ಜೊತೆಗೆ ಮಿಶ್ರ ಹಾಗೂ ಮಧ್ಯಂತರ ಬೆಳೆಗಳು

ಬಳ್ಳಾರಿ ಜಿಲ್ಲೆಯ ರೈತರು ಕೋವಿಡ್ ನಂತರ ಏಕ ಬೆಳೆ ಪದ್ಧತಿಯನ್ನು ಕಡಿಮೆ ಮಾಡಿ ಮಿಶ್ರ ಹಾಗೂ ಮಧ್ಯಂತರ ಬೆಳೆಗಳ ಬೆಸಾಯ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಒಂದು ಬೆಳೆಯಿಂದ ನಷ್ಟವಾದರೆ ಇನ್ನೊಂದು ಬೆಳೆಯಿಂದ ಅನುಕೂಲವಾಗುತ್ತದೆ ಎಂಬುದು ರೈತರ ಅನುಭವವಾಗಿದೆ. ರೈತರು ಸಾಲ ಮಾಡಿ ಬಾಳೆ ಬೆಳೆ ಜೊತೆಗೆ ತರಕಾರಿ, ಹಣ್ಣು ಇತರೆ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಮುಖ್ಯ ಬೆಳೆಯಾದ ಬಾಳೆ ಉತ್ಪಾದನೆಗೆ ತೋಟಗಾರಿಕೆ ಇಲಾಖೆಗಳಿಂದ ಸಮಗ್ರ

***Please cite this article as:*** ಮಾಳ್ಗಿ ತಿಮ್ಮಣ್ಣ & ಕೆ.ಎಂ.ಮಂಜುನಾಥ. (2022). ಬಾಳೆ ಬೆಳೆಯ ಜೊತೆಗೆ ಬೆಳೆಯುವ ಮಿಶ್ರ ಹಾಗೂ ಮಧ್ಯಂತರ ಬೆಳೆಗಳು ಮತ್ತು ಮಾರುಕಟ್ಟೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 83–87.

ತೋಟಗಾರಿಕೆ ಅಭಿವೃದಿ ಯೋಜನೆಯಡಿಯಲ್ಲಿ ಬಾಳೆ ಬೆಳೆಯುವುದಕ್ಕೆ ಸಹಾಯಧನವನ್ನು ನೀಡಲಾಗುತ್ತದೆ. ಈ ಸಹಾಯಧನವನ್ನು ಪಡೆಯಲು ರೈತನು ಮೊದಲು ತನ್ನ ವೈಯಕ್ತಿಕ ಹಣದಿಂದ ಬಾಳೆಯನ್ನು ಬೆಳೆಯಬೇಕಾಗುತ್ತದೆ ನಂತರ ರೈತರು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ ನಂತರ ಹಂತ ಹಂತವಾಗಿ ಬಾಳೆ ಉತ್ಪಾದನೆಗೆ ಸಹಾಯಧನವನ್ನು ಪಡೆಯಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕೋವಿಡ್ ನಂತರ ಸರ್ಕಾರವು ಯಾವುದೇ ತೋಟಗಾರಿಕೆ ಇಲಾಖೆಗಳಿಂದ ಸಮಗ್ರ ಬಾಳೆ ಉತ್ಪಾದನೆಗೆ ಸಹಾಯಧನವನ್ನು ನೀಡುವಲ್ಲಿ ವಿಫಲವಾಗಿವೆ. ಹಾಗಾಗಿ ರೈತರು ಬಾಳೆ ಬೆಳಯುವುದಕ್ಕೆ ಹಿಂದೇಟು ಹಾಕುತ್ತಿರುವುದು ಕಂಡುಬಂದಿದೆ. ಬಾಳೆ ಬೆಳೆಯುವುದಕ್ಕೆ ಸಹಾಯಧನವನ್ನು ಪಡೆಯಬೇಕಾದರೆ ಸರಕಾರದ ನಿಯಾಮಾವಳಿಯನ್ನು ರೈತರು ಅನುಸರಿಸಬೇಕಾಗುತ್ತದೆ. ಯಾವ ಬಾಳೆ ತಳಿಯನ್ನು ಆಯ್ಕೆ ಮಾಡುತ್ತಾರೆ? ಯಾವ ವಿಧಾನದ ಮೂಲಕ ನಾಟಿ ಮಾಡುತ್ತಾರೆ? ಯಾವ ಯೋಜನೆಯಿಂದ ಕೂಲಿಕಾರ್ಮಿಕರಿಗೆ ಹಣ ಸಂದಾಯ ಮಾಡುತ್ತಾರೆ? ರೈತರು ಗ್ರಾಮೀಣ ಭಾಗಕ್ಕೆ ಸೇರಿದ್ದಾರೆ? ಗ್ರಾಮೀಣ ನರೇಗಾ ಯೋಜನೆಯ ಪ್ರಮಾಣಪತ್ರವನ್ನು ಹೊಂದಿದ್ದಾರೆ? ರೈತರು ಸಣ್ಣ ಹಿಡುವಳಿದಾರರೇ? ಹೀಗೆ ಹತ್ತಾರು ನಿಯಮಗಳಿಗೆ ಬದ್ಧರಾಗಿ ಸರ್ಕಾರದಿಂದ ಸಹಾಯಧನವನ್ನು ಪಡೆಯಲು ರೈತರು ಸಫಲರಾಗಬೇಕು. ರೈತರಿಗೆ ತೋಟಗಾರಿಕೆ ಇಲಾಖೆಗಳಿಂದ ಯಾವ ರೀತಿಯ ಯೋಜನೆಗಳು ಬರುತ್ತವೆ ಎಂಬುದು ಇಲ್ಲಿಯ ತನಕ ತಿಳಿಯದೇ ಇರುವುದು ನಿಜಕ್ಕೂ ವಿಪರ್ಯಾಸವಾಗಿದೆ ಎಂದು ಹೀರೆಕೇರಿ ಪೊಂಪಾಪತಿ ಮತ್ತು ಕಮಲಾಪುರ ಹೀರೆಕೇರಿ ಮಾಳ್ಗಿ ಓಬಯ್ಯರವರು ಬಾಳೆ ಹಾಗೂ ಮಿಶ್ರ ಮತ್ತು ಮಧ್ಯಂತರ ಬೆಳೆಗಾರರಾಗಿ ಹೇಳುತ್ತಾರೆ.

**ಮಿಶ್ರ ಮತ್ತು ಅಂತರ ಬೆಳೆ ಏಕೆ ಬೇಕು?**

ತೋಟಗಾರಿಕೆ ಮುಖ್ಯ ಬೆಳೆಯೊಂದಿಗೆ ಹೊಂದಿಕೆಯಾಗುವುದು ಬಹಳ ಮುಖ್ಯವಾಗಿದೆ. ಬೆಳೆಗೆ ಹೆಚ್ಚು ವೆಚ್ಚವಾದರೂ ಕನಿಷ್ಠ ಆದಾಯವನ್ನಾದರೂ ತರುವ ಬೆಳೆಯಾಗಿರಬೇಕು. ಅತಿಯಾಗಿ ನೀರು, ಗೊಬ್ಬರವನ್ನೂ ಕಬಳಿಸದೇ, ಇರುವಷ್ಟರಲ್ಲಿಯೇ ಬದುಕುವಂತ ಬೆಳೆಯಾಗಿರಬೇಕು. ಒಮ್ಮೆಗೆ ಒಂದೇ ರೀತಿಯ ಅಂತರ ಬೆಳೆ ಬೆಳೆಯ ಬೇಕೆಂದೇನೂ ಇಲ್ಲ. ಅನೇಕ ರೀತಿಯ ಬೆಳೆಗಳನ್ನು ಬೆಳೆಯಬಹುದು. ಅವೆಲ್ಲವೂ ಮುಖ್ಯ ಬೆಳೆಗೆ ಮೊದಲು ಸಹಕಾರಿಯಾಗಿರಬೇಕು. ಪರಸ್ಪರ ಸಹಕಾರಿಯೂ ಆಗಿರಬೇಕು.

ಅಂತರ ಬೆಳೆಗಳಲ್ಲಿ ಅಲ್ಪ ಕಾಲದ ಬೆಳೆಗಳು, ವಾರ್ಷಿಕ ಬೆಳೆಗಳು ಹಾಗೂ ದೀರ್ಘ ಕಾಲದ ಬೆಳೆಗಳೆಂದು ಮೂರು ವಿಧಗಳು ಇವೆ. ದ್ವಿದಳ ಧಾನ್ಯಗಳು, ತರಕಾರಿಗಳು, ಬಾಳೆ ಮುಂತಾದವು ವಾರ್ಷಿಕ ಬೆಳೆಗಳಾದರೆ ಲವಂಗ, ಏಲಕ್ಕಿ, ಕಾಳುಮೆಣಸು ಮುಂತಾದವುಗಳು ದೀರ್ಘಕಾಲ ಇರುವ ಬೆಳೆಗಳನ್ನು ಬೆಳೆಯಬಹುದು.

ಸಾಂಪ್ರದಾಯಿಕವಾಗಿ ರೈತರು ಬೆಳೆಯಲು ಮುಂದಾಲೋಚನೆಯನ್ನಿಟ್ಟುಕೊಂಡು ಯಾವ ಸಂದರ್ಭಕ್ಕೆ ಯಾವ ಬೆಳೆಗಳನ್ನು ಬೆಳೆಯಬೇಕು ಎಂದು ಮೊದಲೇ ನಿರ್ಧರಿಸುತ್ತಾರೆ. ಮಣ್ಣಿನ ಫಲವತ್ತತೆ ಹೆಚ್ಚಿಸಲು, ಮುಖ್ಯ ಬೆಳೆಯ ಇಳುವರಿ ಹೆಚ್ಚಿಸಲು, ಭೂಮಿಯನ್ನು ಬಿಸಿಲಿನಿಂದ ರಕ್ಷಿಸಲು, ಇರುವ ಜಾಗದಿಂದ ಆದಾಯ ಹೆಚ್ಚಿಸಲು, ಪೀಡೆಗಳ ನಿವಾರಣೆಗೆ, ನೀರು ಉಳಿಸಲು, ಗೊಬ್ಬರ ಉಳಿಸಲು, ಜೈವಿಕ ಸಮಸ್ಯೆ ತಪ್ಪಿಸಲು, ಔಷಧೀಯ/ಕೀಟನಾಶಕಗಳ ಕಡಿಮೆ ಬಳಿಕೆ, ಭೂಮಿಯ ಫಲವತ್ತತೆ ಕಾಪಾಡಲು, ಇಷ್ಟೆಲ್ಲಾ ಅವಶ್ಯಕತೆ ಇರುವ ಕಾರಣಕ್ಕೆ ಮಿಶ್ರ ಮತ್ತು ಮಧ್ಯಂತರ ಬೆಳೆಗಳನ್ನು ಬೆಳೆಯುತ್ತಾರೆ. ಮಿಶ್ರ ಹಾಗೂ ಮಧ್ಯಂತರ ಬೆಳೆಗಳ ಪ್ರಮುಖ ಗುಣಲಕ್ಷಣಗಳೆಂದರೆ ಈ

ವ್ಯವಸಾಯದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗುವುದು, ವೈಜ್ಞಾನಿಕ ಕೃಷಿ ವಿಧಾನಗಳನ್ನು ಅನುಸರಿಸುವುದು, ಮತ್ತು ರೈತರ ಆರ್ಥಿಕ ಪರಿಸ್ಥಿತಿಯಲ್ಲಿ ಚೇತರಿಕೆ.

**ಏಕಬೆಳೆ, ಬಹುಬೆಳೆ ಮತ್ತು ಮಿಶ್ರಬೆಳೆಗಳ ಪದ್ಧತಿಗಳು**

ಒಂದು ಭೂಮಿಯಲ್ಲಿ ಒಂದು ವರ್ಷದಲ್ಲಿ ಒಂದೇ ಒಂದು ಬೆಳೆಯನ್ನು ಬೆಳೆಯುವುದಕ್ಕೆ ಏಕಬೆಳೆ ಪದ್ಧತಿ ಎನ್ನುತ್ತಾರೆ. ಇದಕ್ಕೆ ಪ್ರತಿಯಾಗಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಬೆಳೆಗಳನ್ನು ಒಂದೇ ಭೂಮಿಯಲ್ಲಿ ಒಂದು ವರ್ಷದಲ್ಲಿ ಆದರೆ ಬೇರೆ ಬೇರೆ ಸಾಲುಗಳಲ್ಲಿ ಬೆಳೆಯುವುದೇ ಬಹುಬೆಳೆ ಪದ್ಧತಿ ಎನ್ನುತ್ತಾರೆ. ಒಂದೇ ಭೂಮಿಯಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಬೆಳೆಗಳನ್ನು ಒಂದೇ ಋತುವಿನಲ್ಲಿ ಬೆಳೆಯುವುದಕ್ಕೆ ಮಿಶ್ರಬೆಳೆ ಎನ್ನುತ್ತಾರೆ.

**ಮಧ್ಯಂತರ ಬೆಳೆ ಪದ್ಧತಿ**

ಒಂದು ಬೆಳೆಯನ್ನು ಇನ್ನೊಂದು ಬೆಳೆಯ ಸಾಲುಗಳ ನಡುವಿನ ಅಂತರದಲ್ಲಿ ಬೆಳೆಯುವುದಕ್ಕೆ ಅಂತರ ಬೆಳೆ ಬೇಸಾಯ ಪದ್ಧತಿ ಎನ್ನುತ್ತೇವೆ. ಉದಾ: ಬಾಳೆ–ಅಡಿಕೆ, ಬಾಳ–ತೆಂಗು, ಬಾಳೆ–ತರಕಾರಿ, ಬಾಳ–ಹೂವಿನ ಬೆಳೆಗಳಾಗಿವೆ. ತೋಟಗಾರಿಕೆ ಬೆಳೆಗಳಾದ ಬಾಳೆಯನ್ನು ತೆಂಗು ಮತ್ತು ಅಡಿಕೆಯಲ್ಲಿ ಮಿಶ್ರ ಹಾಗೂ ಮಧ್ಯಂತರ ಬೆಳೆಯಾಗಿ ಬೆಳೆಯಬಹುದು. ಮಲೆನಾಡು ಪ್ರದೇಶದಲ್ಲಿ ಬಾಳೆಯನ್ನು ಕಾಫಿ, ಕೋಕೋ, ಕಿತ್ತಳೆ ಹಾಗೂ ಏಲಕ್ಕಿ ತೋಟಗಳಲ್ಲಿ ಮಿಶ್ರಬೆಳೆಯಾಗಿ ಬೆಳೆಯಬಹುದು. ಚೆಂಡೂ, ಹುರಳಿ, ಸಾಂಬಾರ, ಈರುಳ್ಳಿ, ಅಲಸಂದೆ ಇತ್ಯಾದಿ ಬೆಳೆಗಳನ್ನು ಅಂತರಬೆಳೆಗಳಾಗಿ ಬೆಳೆಯಬಹುದು. ಮಿಶ್ರ ಹಾಗೂ ಮಧ್ಯಂತರ ಬೆಳೆಗಳನ್ನು ಬೆಳೆಯುವುದರಿಂದ ಕಳೆಗಳ ನಿರ್ವಹಣೆ ಸುಲಭ ಹಾಗೂ ಹೆಚ್ಚಿನ ಹೆಚ್ಚಿನ ಇಲ್ಲ ಅಲ್ಪ ಪ್ರಮಾಣ ಆದಾಯವನ್ನು ಪಡೆಯಬಹುದು.

**ಬಾಳೆ ಮುಖ್ಯ ಬೆಳೆ ಹಾಗೂ ಬಾಳೆ ಪರ್ಯಾಯ ಬೆಳೆ**

ಬಾಳೆ ಬೆಳೆಯನ್ನು ಮುಖ್ಯ ಬೆಳೆಯಾಗಿ ಹಾಗೂ ಪರ್ಯಾಯ ಬೆಳೆಯಾಗಿ ಬೆಳೆದುಕೊಳ್ಳುತ್ತಾರೆ. ಬಾಳೆಯನ್ನು ಏಕ ಬೆಳೆ ಪದ್ಧತಿ ಜೊತೆಗೆ ಮಿಶ್ರ ಹಾಗೂ ಮಧ್ಯಂತರ ಬೆಳೆಗಳಾಗಿ ಬೆಳೆಯುತ್ತಾರೆ. ಬಳ್ಳಾರಿ ಜಿಲ್ಲೆ ಹಾಗೂ ಕರ್ನಾಟಕದಲ್ಲಿ ಬಾಳೆ ಬೆಳೆಯನ್ನು ಜುಲೈ–ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚು ನಾಟಿ ಮಾಡುವುದು ಸೂಕ್ತ ಸಮಯವಾಗಿದೆ. ಬಾಳೆಯನ್ನು ಏಕಬೆಳೆ ಪದ್ಧತಿಯಲ್ಲಿ ಮೊದಲು ನಾಟಿ ಮಾಡಿದ ನಂತರ ಆ ಬೆಳೆ ಜೊತೆಗೆ ಸುಮಾರು 6 ತಿಂಗಳವರೆಗೆ ಮಿಶ್ರ ಹಾಗೂ ಮಧ್ಯಂತರ ಬೆಳೆಗಳಾಗಿ ತರಕಾರಿ, ಹೂ, ಇತರೆ ಹಣ್ಣಿನ ಬೆಳೆಗಳನ್ನು ಬೆಳೆದುಕೊಳ್ಳಬಹುದು. ಏಕೆಂದರೆ ಆರು ತಿಂಗಳೊಳಗೆ ಮಿಶ್ರ ಹಾಗೂ ಮಧ್ಯಂತರ ಬೆಳೆಗಳನ್ನು ಬೆಳೆದುಕೊಳ್ಳಬೇಕು, 6 ತಿಂಗಳವರೆಗೆ ಬಾಳೆ ಗಿಡವು ಅತಿ ಸಣ್ಣದಾಗಿರುತ್ತದೆ. ಬಾಳೆ ಗಿಡದ ಎಲೆಗಳು ಭೂಮಿ ತುಂಬಾ ನೆರಳಾಗುವುದಿಲ್ಲ ಬಾಳೆಗಿಡದಿಂದ ಎಲೆಗಳು ನೆರಳಾಗುವಷ್ಟರಲ್ಲೇ, ನೀರು, ಗಾಳಿ, ಬಿಸಿಲು ಸುಗಮವಾಗಿ ಭೂಮಿಗೆ ಒದಗಿಸುವುದರ ಮೂಲಕ ಮಿಶ್ರ ಹಾಗೂ ಮಧ್ಯಂತರ ಬೆಳೆಗಳನ್ನು ಬೆಳೆದುಕೊಳ್ಳಬಹುದು. ಯಾವ ಬೆಳೆಗಳೆಂದರೆ ಈ ಕೆಳಗಿನಂತೆ ನೋಡಬಹುದು.

ಸಾಮಾನ್ಯವಾಗಿ ಬಾಳೆಯ ಜೊತೆಗೆ ತರಕಾರಿ, ಹೂವು, ಹಣ್ಣು (ಪಪ್ಪಾಯಿ, ಕಲ್ಲಂಗಡಿ, ಕರಬೂಜ ಇತ್ಯಾದಿ) ಹಾಗೂ ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯಬಹುದಾಗಿರುತ್ತದೆ. ಈ ಬೆಳೆಗಳು ಬಾಳೆ ಮುಖ್ಯ ಬೆಳೆ ಜೊತೆಗೆ ಬೆಳೆಯುವ ಮಿಶ್ರ ಹಾಗೂ ಅಂತರ ಬೆಳೆಯಾಗಿ ಬೆಳೆಯುದನ್ನು ಕಾಣಬಹುದು. ಮಿಶ್ರ ಬೆಳೆಯಾಗಿ ಬೆಳೆಯುದಕ್ಕೆ ಯಾವುದೇ ಅಂತರವು ಇರುವುದಿಲ್ಲ, ಇನ್ನೂ ಕೆಲವು ರೈತರು ಇತರೆ ಮುಖ್ಯ

ಬೆಳೆಗಳೊಂದಿಗೆ ಬಾಳೆಯನ್ನು ಪರ್ಯಾಯ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಅಡಿಕೆ, ತೆಂಗು, ಮಾವು ಮುಂತಾದ ಪ್ರಮುಖ ಬೆಳೆಗಳ ಜೊತೆಗೆ ಬಾಳೆಯನ್ನು ಪರ್ಯಾಯ ಬೆಳೆಯನ್ನಾಗಿ ಬೆಳೆಯುತ್ತಾರೆ. ರೈತರ ಭೂಮಿಗೆ ಅನುಕೂಲವಾಗುವ ಮತ್ತು ಹೊಂದಾಣಿಕೆ ಮೇಲೆ ರೈತರು ಸಸಿಗಳನ್ನು ನೆಟ್ಟು ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ.

**ಮಿಶ್ರ ಹಾಗೂ ಮಧ್ಯಂತರ ಬೆಳೆಗಳು ಇಳುವರಿ ಮಾರಾಟ**

ಬಾಳೆ ಬೆಳೆ ಜೊತೆಗೆ ಬೆಳೆದಿರುವ ಮಿಶ್ರ ಹಾಗೂ ಮಧ್ಯಂತರ ಬೆಳೆಗಳ ಮಾರಾಟದಿಂದ ಬಂದ ಆದಾಯವನ್ನು ಮುಖ್ಯ ಬೆಳೆ ಉತ್ಪಾದನೆಗೆ ಖರ್ಚು ಮಾಡಲಾಗುತ್ತದೆ. ಕೋವಿಡ್ ನಂತರ ಬಾಳೆ ಜೊತೆಗೆ ಬೆಳೆದಿರುವ ಮಿಶ್ರ ಹಾಗೂ ಮಧ್ಯಂತರ ಬೆಳೆಗಳು ಏಕ ಬೆಳೆಯಾಗಿ ಬೆಳೆದರೂ ಸಹ ಮಾರುಕಟ್ಟೆ ಅಭಾವದಿಂದ ರೈತರು ನಷ್ಟಕ್ಕೆ ಒಳಗಾದರು. ಕೋವಿಡ್ ನಂತರ ರೈತರ ಸ್ಥಿತಿಗತಿ ನಿಧಾನಗತಿಯಲ್ಲಿ ಸುಧಾರಿಸುತ್ತಿದೆ. ಹಾಗಾಗಿ ರೈತನು ಬಾಳೆ ಬೆಳೆ ಜೊತೆಗೆ ಬೆಳೆದ ಮಿಶ್ರ ಹಾಗೂ ಮಧ್ಯಂತರ ಬೆಳೆಗಳಿಗೆ ಮಾರುಕಟ್ಟೆ ಕಲ್ಪಿಸಲಾಗಿದೆ ಹಾಗೂ ಸ್ಥಳೀಯ ಸಂತೆ, ಜನರ ಓಡಾಟಕ್ಕೆ ಯಾವುದೇ ನಿರ್ಬಂಧಗಳಿಲ್ಲ, ಹಾಗಾಗಿ ರೈತರ ಬೆಳೆಗಳಿಗೆ ಅಲ್ಪಾಪ್ರಮಾಣದ ಮಾರುಕಟ್ಟೆಯಲ್ಲಿ ಬೆಳೆಗಳಿಗೆ ಬೆಲೆ ಸಿಗುತ್ತಿದೆ. ಮತ್ತೊಂದು ಕಡೆ ಹಲವು ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪದಿಂದ ಅಲ್ಲಲ್ಲಿ ಬೆಳೆಗಳು ನಷ್ಟವಾಗಿದೆ. ಇದರಿಂದ ಅಲ್ಪ ಪ್ರಮಾಣದ ಇಳುವರಿಗೆ ಹೆಚ್ಚಿನ ಬೇಡಿಕೆ ಬೆಳೆ ಸಿಗುತ್ತಿರುವುದು ನಿಜಕ್ಕೂ ಸಂತಸ, ಮತೊಂದು ಕಡೆ ಬೆಳೆದಿರುವ ಬೆಳೆಗಳು ಪ್ರಕೃತಿ ವಿಕೋಪದಿಂದ ನಶಿಸಿ ಹೋಗಿ ರೈತನ ತಲೆ ಮೇಲೆ ಕೈಕಟ್ಟಿ ಕೂರುವಂತೆ ಮಾಡಿದೆ.

**ಮಿಶ್ರ ಮತ್ತು ಮಧ್ಯಂತರ ಬೆಳಗಳ ಮಾರಾಟ ವಿಧಾನಗಳು**

ರೈತರು ತಾವು ಬೆಳೆದ ವಿವಿಧ ಬೆಳೆಗಳನ್ನು ಸ್ಥಳೀಯ ಸಂತೆ, ಸ್ಥಳೀಯ ಮಾರುಕಟ್ಟೆ, ಎಪಿಎಂಸಿ ಮಾರುಕಟ್ಟೆ, ಮಧ್ಯವರ್ತಿಗಳು ಮತ್ತು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಾನೆ. ಇದರಿಂದ ಬಂದ ಆದಾಯದಲ್ಲಿ ಅವರಿಗೆ ದಲ್ಲಾಳಿ ಹಾಗೂ ಖರಿದೀದಾರರ ಕಮಿಷನ್, ಸಾಲ ಕೊಟ್ಟಿದ್ದರೆ, ಶೇಕಡ 2 ರಷ್ಟು ಬಡ್ಡಿ ಕಡಿತಗೊಳಿಸಿ ಉಳಿದ ಹಣವನ್ನು ರೈತರಿಗೆ ಸಂದಾಯ ಮಾಡುತ್ತಾರೆ.

ಅಡಿಕೆ, ತೆಂಗು, ಮಾವು ಇತ್ಯಾದಿ ಬೆಳೆಗಳು ಬಾಳೆ ಜೊತೆಗೆ ಬೆಳೆದು ಮೂರರಿಂದ ನಾಲ್ಕು ವರ್ಷದ ನಂತರ ಫಲ ನೀಡುತ್ತದೆ. ಅಷ್ಟರವರೆಗೆ ವಾರ್ಷಿಕ ಬೆಳೆಯಾದ ಬಾಳೆಯಲ್ಲಿ ಅಲ್ಪ ಪ್ರಮಾಣದ ಆದಾಯವನ್ನು ಪಡೆದು ಆ ಆದಾಯದಲ್ಲಿ ಮುಖ್ಯ ಬೆಳೆಗಳಾದ ಮೇಲಿನ ಬೆಳೆಗಳಿಗೆ ಬಳಸಿಕೊಳ್ಳಲಾಗುತ್ತದೆ. ಅಡಿಕೆ, ತೆಂಗು, ಮಾವು ಇತ್ಯಾದಿ ಬೆಳೆಗಳನ್ನು ವಾರ್ಷಿಕವಾಗಿ ಒಂದರಿಂದ ಎರಡು ಬಾರಿ ಇಳುವರಿಯನ್ನು ವರ್ಷದಲ್ಲಿ ಅತಿಹೆಚ್ಚು ಮಧ್ಯವರ್ತಿಗಳಿಗೆ ಮಾರಾಟ ಮಾಡುತ್ತಾರೆ. ಈ ಮೇಲಿನ ತೋಟಗಾರಿಕೆ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲು ತೋಟಗಾರಿಕೆ ಇಲಾಖೆಯಿಂದ ಸಹಾಯಧನ ಪಡೆದುಕೊಳ್ಳಬಹುದು. ಕೆಲವು ರೈತರು ಮಧ್ಯವರ್ತಿಗಳಿಗೆ ಮಾರಾಟ ಮಾಡದೇ ಇದ್ದಾಗ ಇಳುವರಿಯನ್ನು ನೇರವಾಗಿ ಗ್ರಾಹಕರಿಗೆ, ಇಲ್ಲ ಎಪಿಎಂಸಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರ ಇಳುವರಿ ಮತ್ತು ಖರೀದಿದಾರರು ಆಧಾರದ ಮೇಲೆ ಮಾರುಕಟ್ಟೆಯ ಬೆಲೆ ನಿರ್ಧಾರವಾಗುತ್ತದೆ. ಮಾರುಕಟ್ಟೆಯಲ್ಲಿ ಯಾವುದೇ ರೀತಿಯ ಖಚಿತವಾದ ಬೆಲೆಗಳು ನಿರ್ಧಾರವಾಗುವುದಿಲ್ಲ, ಲಾಭವೋ ನಷ್ಟವೋ ಎರಡನ್ನೂ ಒಳಗೊಂಡಿರುವ ಎಪಿಎಂಸಿ ಮಾರುಕಟ್ಟೆ ಬೆಲೆ ಆಗಿರುತ್ತದೆ. ಒಟ್ಟಾರೆಯಾಗಿ ರೈತ ಸಾಲ, ಗುತ್ತಿಗೆ ಭೂಮಿ, ಕೃಷಿ ಕಾರ್ಮಿಕರ ಹೊಂದಾಣಿಕೆ, ರಾಸಾಯನಿಕ ಗೊಬ್ಬರದ ಅಭಾವ, ಪ್ರಕೃತಿ ವಿಕೋಪ, ಮಳೆ ಅಭಾವ

ಇತ್ಯಾದಿಗಳ ಪರಿಸ್ಥಿತಿಯನ್ನು ಎದೆಗುಂದದೆ ರೈತನು ಮಿಶ್ರ ಹಾಗೂ ಮಧ್ಯಂತರ ಬೆಳೆಗಳನ್ನು ಬೆಳೆದು ತನ್ನ ಜೀವನವನ್ನು ಕಟ್ಟಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾನೆ.

**ಉಪಸಂಹಾರ**

ಒಟ್ಟಾರೆಯಾಗಿ ರೈತರು ಏಕ ಬೆಳೆ ಪದ್ಧತಿಯ ಜೊತೆಗೆ ಮಿಶ್ರ ಹಾಗೂ ಮಧ್ಯಂತರ ಬೆಳೆಗಳನ್ನು ಬೆಳೆದುಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ಅವಶ್ಯಕತೆಯಾಗಿದೆ, ಹಾಗೂ ತೋಟಗಾರಿಕೆ ಇಲಾಖೆಯಿಂದ ಬಾಳೆ ಉತ್ಪಾದನೆ ನೀಡುವ ಸಹಾಯಧನವನ್ನು ಬಳಸಿಕೊಂಡು ಎಲ್ಲಾ ರೈತರು ಉತ್ಪಾದಕ ಘಟಕಗಳನ್ನು ಸ್ಥಾಪಿಸಿಕೊಳ್ಳಲು ಮುಂದಾಗಬೇಕಿದೆ.  ಇದರಿಂದ ಅನೇಕ ರೈತರಿಗೆ ಮಾದರಿಯಾಗುವುದರ ಜೊತೆಗೆ ಆರ್ಥಿಕವಾಗಿ ಸಬಲರಾಗಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಳ್ಳೊಳ್ಳಿ ಟಿ.ಬಿ., ವಿಜಯ್ ಅಂಗಡಿ. (2002). ಒಣಪ್ರದೇಶದಲ್ಲಿ ತೋಟಗಾರಿಕೆ. ಕೃಷಿ ವಿಶ್ವವಿದ್ಯಾಲಯ. ಪು.ಸಂ.35–36,179
- ತನ್ವೀರ್ ಅಹ್ಮದ್., ಸುದರ್ಶನ್., ಮುತ್ತುರಾಜು., ಜಿ.ಎಸ್.ಕೆ ಸ್ವಾಮಿ. (2019). ಬಾಳೆ: ಕೃಷಿಕರ ಮಾರ್ಗದರ್ಶಿ. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ. ಪು.ಸಂ.19.
- ನಾಚೇಗೌಡ. ವಿ. (2004). ವಾಣಿಜ್ಯ ಹಣ್ಣಿನ ಬೆಳೆಗಳು. ಕೃಷಿ ವಿಕಾಸ್ ಪಬ್ಲಿಕೇಷನ್ಸ್. ಪು.ಸಂ.35, 40.
- ನಾರಾಯಣರೆಡ್ಡಿ ಎಂ.ಎ. (2010). ಕೃಷಿ ತೋಟಗಾರಿಕೆ. ಕೃಷಿ ವಿಶ್ವವಿದ್ಯಾಲಯ. ಪು.ಸಂ. 27,57,116.
- ನಾರಾಯಣರೆಡ್ಡಿ ಎಂ.ಎ. (2006). ತೋಟಗಾರಿಕೆ ಬೆಳೆಗಳಲ್ಲಿ ಸಸ್ಯಾಭಿವೃದ್ಧಿ. ಕೃಷಿ ವಿಕಾಸ್ ಪಬ್ಲಿಕೇಷನ್ಸ್. ಪು.ಸಂ.35,90
- ವಿರೂಪಾಕ್ಷಪ್ಪ ಹೆಚ್.ಎಸ್. (2015). ಕೃಷಿ ಸಂರಕ್ಷಣೆ.  ಗೀತಾಂಜಲಿ ಪ್ರಕಾಶನ. ಪು.ಸಂ.192.